# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **927**<br>**(ಸಹಕಾರ ಇಲಾಖೆಯಿಂದ ವರ್ಗಾಯಿತ)** |
| **ಸದಸ್ಯರ ಹೆಸರು** | **:** | **ಶ್ರೀಮತಿ ಹೇಮಲತಾ ನಾಯಕ್**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **17-12-2024** |
| **ಉತ್ತರಿಸಬೇಕಾದ ಸಚಿವರು** | **:** | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಹಾಲು ಉತ್ಪಾದಕರ ಒಕ್ಕೂಟಗಳೆಷ್ಟು; ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟಿವೆ; ಎಷ್ಟು ಜನ ನೋಂದಾಯಿತ ಹಾಲು ಉತ್ಪಾದಕರಿದ್ದಾರೆ; ದಿನಪ್ರತಿ ಎಷ್ಟು ಜನ ರೈತರು ಹಾಲು ಸರಬರಾಜು ಮಾಡುತ್ತಿದ್ದಾರೆ; ಹಾಲಿನ ಪ್ರೋತ್ಸಾಹ ಧನವನ್ನು ಪಡೆಯುತ್ತಿರುವ ರೈತರ ಸಂಖ್ಯೆ ಎಷ್ಟಿದೆ; ಸಾಮಾನ್ಯ ಪರಿಶಿಷ್ಟ ಜಾತಿ/ಪಂಗಡಗಳ ರೈತರ ಸಂಖ್ಯೆ ಎಷ್ಟಿದೆ; | ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 26.91 ಲಕ್ಷ ನೋಂದಾಯಿತ ಉತ್ಪಾದಕ ಸದಸ್ಯರಿದ್ದು, ಪ್ರತಿದಿನ 8,92,512 ಲಕ್ಷ ಸಕ್ರಿಯ ಸದಸ್ಯರಿಂದ ಹಾಲು ಸರಬರಾಜಾಗುತ್ತಿದೆ. ಇದರಲ್ಲಿ ಸಾಮಾನ್ಯ 8,06,314 ಪರಿಶಿಷ್ಟ ಜಾತಿ 52,300 ಮತ್ತು ಪರಿಶಿಷ್ಟ ಪಂಗಡ 33,898 ಹಾಲು ಉತ್ಪಾದಕರು ಪ್ರೋತ್ಸಾಹಧನ ಪಡೆಯುತ್ತಿದ್ದಾರೆ. |
| (ಆ) | ಹೈನುಗಾರಿಕೆ ನಡೆಸುವ ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀಟರ್ ಹಾಲಿಗೆ ಎಷ್ಟು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ; 2023 ಏಪ್ರಿಲ್ ತಿಂಗಳಿನಿಂದ 2024 ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಎಷ್ಟು ಮೊತ್ತವನ್ನು ರೈತರಿಗೆ ಪ್ರೋತ್ಸಾಹಧನದ ಯೋಜನೆಯಡಿ ಪಾವತಿ ಮಾಡಲಾಗಿದೆ; ಪ್ರೋತ್ಸಾಹ ಧನವನ್ನು ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು; ಯಾವ ಸಮಯದಿಂದ ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಪ್ರೋತ್ಸಾಹಧನ ನೀಡದೆ ಇರುವುದು ಸರ್ಕಾರ ರೈತರಿಗೆ ಮಾಡಿರುವ ಅನ್ಯಾಯ ವಾಗುವುದಿಲ್ಲವೆ; | ರಾಜ್ಯ ಸರ್ಕಾರವು ಹಾಲು ಉತ್ಪಾದಕರು ಸರಬರಾಜು ಮಾಡುವ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನ ನೀಡುತ್ತಿದೆ.<br><br>2023 ಏಪ್ರಿಲ್ ತಿಂಗಳಿನಿಂದ ಅಕ್ಟೋಬರ್-2024ರ ತಿಂಗಳ ಅಂತ್ಯದವರೆಗೆ ರೂ.2136.78 ಕೋಟಿ ಪ್ರೋತ್ಸಾಹಧನ ರೈತರಿಗೆ ಪಾವತಿ ಮಾಡಲಾಗಿದೆ<br><br>ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಆಗಸ್ಟ್-2024 ರಿಂದ ಅಕ್ಟೋಬರ್-2024 ರವರೆಗೆ ಒಟ್ಟು 3 ತಿಂಗಳಿಗೆ ರೂ.347.60 ಕೋಟಿ ಮತ್ತು ಪರಿಶಿಷ್ಟ ಜಾತಿ ವರ್ಗದ ಹಾಲು ಉತ್ಪಾದಕರಿಗೆ ಅಕ್ಟೋಬರ್-2024 ರ ಮಾಹೆಗೆ ರೂ.6.85 ಕೋಟಿ ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ ಸೆಪ್ಟೆಂಬರ್-2024 ಮತ್ತು ಅಕ್ಟೋಬರ್-2024ರ ಮಾಹೆಗಳಿಗೆ ರೂ.9.00 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಇರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ ಇದುವರೆಗೆ ಮೂರು ಕಂತುಗಳಲ್ಲಿ ರೂ.974.98 ಕೋಟಿ ಹಾಗೂ ನಾಲ್ಕನೇ ಕಂತಿನ ಅನುದಾನ ರೂ.297.47 ಕೋಟಿಗಳಲ್ಲಿ ಮುಂಗಡವಾಗಿ ರೂ.150.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿರುವ ಅನುದಾನದಲ್ಲಿ ಸಾಮಾನ್ಯ ವರ್ಗದ 8.92 ಲಕ್ಷ ಹಾಲು ಉತ್ಪಾದಕರಿಗೆ ಜುಲೈ-2024ರ ಮಾಹೆಯವರೆಗೆ ರೂ.1042.98 ಕೋಟಿ ಪಾವತಿಸಲಾಗಿದೆ ಮತ್ತು |

| | | |
|---|---|---|
| | | ಪರಿಶಿಷ್ಟ ಜಾತಿ ವರ್ಗದ 52 ಸಾವಿರ ಹಾಲು ಉತ್ಪಾದಕರಿಗೆ ಸೆಪ್ಟೆಂಬರ್-2024ರ ಮಾಹೆಯವರೆಗೆ ರೂ.50.16 ಕೋಟಿ ಮತ್ತು ಪರಿಶಿಷ್ಟ ಪಂಗಡ ವರ್ಗದ 33 ಸಾವಿರ ಹಾಲು ಉತ್ಪಾದಕರಿಗೆ ಆಗಸ್ಟ್-2024ರ ಮಾಹೆಯವರೆಗೆ ರೂ.30.02 ಕೋಟಿ ಪ್ರೋತ್ಸಾಹಧನವನ್ನು ಪಾವತಿಸಲಾಗಿದೆ.<br><br>4ನೇ ಕಂತಿನಲ್ಲಿ ಬಿಡುಗಡೆಗೆ ಬಾಕಿಯಿರುವ ಅನುದಾನ ಜನವರಿ-2025 ರಲ್ಲಿ ಬಿಡುಗಡೆಯಾಗುತ್ತದೆ. ನಂತರ ಬಾಕಿಯಿರುವ ಪ್ರೋತ್ಸಾಹಧನ ಪಾವತಿಗೆ ಕ್ರಮ ವಹಿಸಲಾಗುವುದು. |
| (ಇ) | ರೈತರಿಂದ ಸಂಗ್ರಹಿಸಿದ ಹಾಲು ನಂದಿನಿ ಹಾಗೂ ಇತರೆ ಜಿಲ್ಲಾ ಮಟ್ಟದ ಸಹಕಾರಿ ಹಾಲು ಮಾರಾಟ ಮಂಡಳಿ ಮೂಲಕ ಹಾಲು ವಿತರಣೆ ಹಾಗೂ ಮಾರಾಟವಾಗುತ್ತಿದ್ದು, ದಿನಂಪ್ರತಿ ಜನರು ಹಣವನ್ನು ನೀಡಿ ಖರೀದಿಸುತ್ತಿರುವುದರಿಂದ ಹಣ ಸಂಗ್ರಹವು ಅಪಾರವಾಗಿ ಬರುತ್ತಿದ್ದು, ಈ ಹಾಲಿನ ಇತರೆ ಉತ್ಪನ್ನಗಳ ಮಾರಾಟದಿಂದ ಅಪಾರವಾಗಿ ಹಣ ಸಂಗ್ರಹವಾಗುತ್ತದೆ ಹಾಗೂ ಹಾಲಿನ ಖರೀದಿ ದರ ಹಾಗೂ ಮಾರಾಟದ ದರವೂ ಒಂದೇ ಆಗಿರುವುದಿಲ್ಲ. ಮಾರಾಟ ಮಾಡುವಾಗ ಹೆಚ್ಚಿನ ದರದಲ್ಲಿ ಮಾರಾಟವಾಗುತ್ತಿದೆ; ಹಾಗಾಗಿ ಹಾಲಿನ ಪ್ರೋತ್ಸಾಹ ಧನವನ್ನು ರೈತರಿಗೆ ನಿಗದಿತ ಸಮಯದಲ್ಲಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಯೇನು? | ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳ 9.00 ಲಕ್ಷ ಸದಸ್ಯರಿಂದ ಪ್ರತಿ ದಿನ 90.00 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಸಂಗ್ರಹಿಸುವ ಹಾಲನ್ನು ಸಂಸ್ಕರಣೆ, ಶೈತ್ಯೀಕರಣ ಹಾಗೂ ಇನ್ನಿತರೆ ವೆಚ್ಚಗಳನ್ನಾಧರಿಸಿ, ಜಿಲ್ಲಾ ಹಾಲು ಒಕ್ಕೂಟಗಳ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಮತ್ತು ಒಕ್ಕೂಟಗಳ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ ಖರೀದಿ ದರವನ್ನು ನಿಗದಿಪಡಿಸಲಾಗುವುದು.<br><br>ಸರ್ಕಾರವು ಅನುದಾನವನ್ನು ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಇದುವರೆಗೆ ಮೂರು ಕಂತುಗಳಲ್ಲಿ ರೂ.974.98 ಕೋಟಿ ಹಾಗೂ ನಾಲ್ಕನೇ ಕಂತಿನ ಅನುದಾನ ರೂ.297.47 ಕೋಟಿಗಳಲ್ಲಿ ಮುಂಗಡವಾಗಿ ರೂ.150.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿರುವ ಅನುದಾನ ರೂ.1124.98 ಕೋಟಿಗಳನ್ನು ರಾಜ್ಯದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪಾವತಿಸಲಾಗಿದೆ.<br><br>4ನೇ ಕಂತಿನಲ್ಲಿ ಬಿಡುಗಡೆಗೆ ಬಾಕಿಯಿರುವ ಅನುದಾನ ಜನವರಿ-2025 ರಲ್ಲಿ ಬಿಡುಗಡೆ ಮಾಡಲಾಗುವುದು. |

**ಇ- ಪಸಂಮೀ 331 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**